# ಒಲವಿನ ವಿಜ್ಞಾನ




ಯುಗಯುಗಗಳೇ ಉರುಳಿದರೂ ಪ್ರೇಮ ಸದಾ ನವಪಲ್ಲವಿಯನ್ನು ಸೂಸುತ್ತಿರುತ್ತದೆ. 'ಪ್ರೇಮಿಗಳ ದಿನ' ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ 'ಪ್ರೀತಿಯ ಬಯಾಲಜಿ' ಹೇಗಿದೆ ನೋಡಿ!

ನಿರ್ವಹಣೆ: ಸುಮಲತಾ ಎನ್‌

ಪ್ರೇಮಿಗಳು, ಅಷ್ಟೇ ಏಕೆ ಬಹುಪಾಲು ಎಲ್ಲರೂ ಪ್ರೀತಿ ಮನಸ್ಸಿನಲ್ಲಿ ಹುಟ್ಟುತ್ತದೆ ಎಂದು ಹೇಳುತ್ತಾರೆ, ಪ್ರತಿ ಮಾತಿನಲ್ಲೂ ಅಭಿವ್ಯಕ್ತಿಸುತ್ತಾರೆ. ಆದರೆ ಪ್ರೀತಿಯ ಉಗಮಕ್ಕೆ ಮೆದುಳೇ ಮೂಲ. ಮೆದುಳಿನಲ್ಲಿ ಉಂಟಾಗುವ ರಾಸಾಯನಿಕಗಳೇ ಪ್ರೀತಿಯ ಭಾವ ಸ್ಫುರಿಸಲು ಕಾರಣ.

## ಮೆದುಳಿನಲ್ಲಿ ಪ್ರೀತಿಯ ಉದ್ಭವ



- ಹಿಪ್ಪೊಕ್ಯಾಂಪಸ್‌, ಮೀಡಿಯಲ್ ಇನ್ಸುಲಾ, ಆ್ಯಂಟೀರಿಯರ್ ಸಿಂಗ್ಯುಲೇಟ್ – ಮೆದುಳಿನ ಈ ಮೂರು ಭಾಗಗಳು ಭಾವನೆಗಳ ನಿರ್ವಹಣೆಗೆ ಸಹಾಯ ಮಾಡುತ್ತವೆ. ಪ್ರೀತಿಯ ಬೆಳವಣಿಗೆಗೂ ಇವೇ ಕಾರಣ.
- ಹೈಪೊಥಲಾಮಸ್– ಮೆದುಳಿನ ಈ ಭಾಗ ಡೊಪಮಿನ್‌, ಆಕ್ಸಿಟಾಸಿನ್ ಹಾಗೂ ವ್ಯಾಸೊಪ್ರೆಸಿನ್ ಹಾರ್ಮೋನುಗಳನ್ನು ಉತ್ಪಾದಿಸುತ್ತದೆ. ಈ ಎಲ್ಲವೂ ಪ್ರೀತಿಯ ಉಗಮಕ್ಕೆ ಅವಶ್ಯಕ.
- ಪಿಟ್ಯುಟರಿ ಗ್ರಂಥಿ: ಹಾರ್ಮೋನುಗಳನ್ನು ನಿರ್ವಹಿಸಿ ಅವನ್ನು ದೇಹದಲ್ಲಿ ಶೇಖರಿಸಿಡುತ್ತದೆ.
- ಅಮಿಗ್‌ಡಾಲಾ (ಬಾದಾಮಿ ಆಕಾರದಲ್ಲಿನ ಮೆದುಳಿನ ಒಂದು ಸಣ್ಣ ಭಾಗ): ಭಯ ಹಾಗೂ ಒತ್ತಡವನ್ನು ಕಡಿಮೆ ಮಾಡುತ್ತದೆ.

ಆಕ್ಸಿಟೋಸಿನ್ ಅನ್ನು 'ಲವ್ ಹಾರ್ಮೋನ್' ಎಂದೇ ಕರೆಯಲಾಗುತ್ತದೆ. ಈ ಹಾರ್ಮೋನು ಪ್ರೀತಿಯ ಭಾವವನ್ನು ಹೆಚ್ಚು ಮಾಡಿ ದೀರ್ಘಕಾಲದ ಬಾಂಧವ್ಯಕ್ಕೆ ಮುನ್ನುಡಿ ಬರೆಯುತ್ತದೆ.



ಉತ್ಸುಕತೆ, ಆತ್ಮೀಯತೆ ಹಾಗೂ ಬದ್ಧತೆ ಈ ಮೂರೂ ಪ್ರೀತಿಯ ಜೀವದ್ರವ್ಯಗಳು.

ಹರ್ಬರ್ಟ್ ಹಾಗೂ ಝೆಲ್ಮೈರಾ ಫಿಷರ್ ಅತಿ ದೀರ್ಘಾವಧಿಯಲ್ಲಿ ಪ್ರೀತಿಯಿಂದ ದಾಂಪತ್ಯ ಜೀವನ ನಡೆಸಿದ್ದು, ಗಿನ್ನಿಸ್ ವಿಶ್ವ ದಾಖಲೆ ಬರೆದಿದ್ದಾರೆ. 2011ರಲ್ಲಿ ಈ ದಾಖಲೆ ಸೃಷ್ಟಿಯಾಯಿತು. ಈ ಇಬ್ಬರೂ ಮದುವೆಯಾಗಿ 86 ವರ್ಷ 290 ದಿನಗಳು ಆಗಿದ್ದವು.